ಶ್ರೀ ಬಿ. ಎನ್. ಬಚ್ಚೇಗೌಡ : ಇದರ ಬಗ್ಗೆ ಎಕ್ಸಾಮಿನ್ ಮಾಡಿ ಹೇಳತ್ತೇನೆ.

ಅಧ್ಯಕ್ಷರು : ಸರಿ ಮುಂದಿನ ಪ್ರಶ್ನೆ.

ಖಾದಿ ಗ್ರಾಮೋದ್ಯೋಗ ಸಂಸ್ಥೆಗಳಿಗೆ ಕೊಡಬೇಕಾಗಿರುವ ಸಹಾಯಧನ

285 - ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96ನೇ ಮತ್ತು 1996-97ನೇ ಹಣಕಾಸು ವರ್ಷಗಳಲ್ಲಿ ರಾಜ್ಯ ಸರ್ಕಾರ ಬೇರೆ ಬೇರೆ ಖಾದಿ ಗ್ರಾಮೋದ್ಯೋಗ ಸಂಸ್ಥೆಗಳಿಗೆ ಕೊಡಬೇಕಾಗಿರುವ ಸಹಾಯಧನ (ರಿಬೇಟ್) ಎಷ್ಟು ಹಾಗೂ ಕೊಡಲಾಗಿರುವ ಸಹಾಯಧನ ಎಷ್ಟು?*

ಆ) *ಸ್ವಾತಂತ್ರ್ಯ ಸಂಗ್ರಾಮದ ಸುವರ್ಣ ಮಹೋತ್ಸವ ಆಚರಿಸುವ ಈ ಐತಿಹಾಸಿಕ ವರ್ಷದಲ್ಲಿ ಯಾದರೂ ಇದೇ ಆಗಸ್ಟ್ 15 ರೊಳಗಾಗಿ ಬಾಕಿ ಉಳಿದಿರುವ ರಿಬೇಟ್ ಹಣ ಎಲ್ಲ ಖಾದಿ ಗ್ರಾಮೋದ್ಯೋಗ ಸಂಸ್ಥೆಗಳಿಗೆ ನೀಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡುವುದಕ್ಕೆ ಪರಿಶೀಲಿಸುವರೇ?*

ಇ) *ಹೆಚ್ಚುವರಿ ಜನರಿಗೆ ಉದ್ಯೋಗಾವಕಾಶ ಕಲ್ಪಿಸುವ, ಸದಾ ಹಣಕಾಸಿನ ತೊಂದರೆ ಅನುಭವಿಸುತ್ತಿರುವ ಈ ಖಾದಿ ಗ್ರಾಮೋದ್ಯೋಗ ಸಂಸ್ಥೆಗಳು ಇನ್ನು ಮುಂದೆಯೂ ರಿಬೇಟ್ ಹಣಕ್ಕಾಗಿ ಪರದಾಡುವ ಪರಿಸ್ಥಿತಿಯಿಂದ ಮುಕ್ತಗೊಳಿಸಲು ಅವಶ್ಯಕ ಕ್ರಮ ಕೈಗೊಂಡು ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಅರ್ಥಪೂರ್ಣವಾಗುವಂತೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು) :

ಅ) ಕೇಳಿರುವ ಮಾಹಿತಿ ಕೆಳಕಂಡಂತಿದೆ:

ಕೊಡಬೇಕಾದ ಮೊತ್ತ (ರೂ. ಲಕ್ಷಗಳಲ್ಲಿ)		ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ)
1995-96	273.17	119.87
1996-97	458.27	395.01

ಆ) ಹೌದು.

ಇ) ಖಾದಿ ವಸ್ತುಗಳಿಗೆ ರಿಬೇಟ್ ನೀಡುವ ಯೋಜನೆಯನ್ನು ಕೇಂದ್ರ ಸರ್ಕಾರವು ಮಂದುವರಿಸಿದ್ದೇ ಆದಲ್ಲಿ, ಸಕಾಲದಲ್ಲಿ ರಿಬೇಟ್ ನೀಡುವುದಕ್ಕೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ.ಆರ್. ಪಾಟೀಲ್ : ನನಗೆ ಕೊಟ್ಟ ಉತ್ತರದಲ್ಲಿ ಇನ್ನು ಎರಡೂ ಕಾಲು ಕೋಟಿ ರಿಬೇಟ್ ಬಾಕಿ ಇದೆ. ಇದನ್ನು ಆಗಸ್ಟ್ ಒಂದರೊಳಗೆ ಪೂರ್ತಿ ಕೊಡುವ ಭರವಸೆ ಕೊಟ್ಟಿದ್ದೀರಿ, ಈ ಎರಡೂ ಕಾಲು ಕೋಟಿಯಲ್ಲಿ ಸುಮಾರು ಒಂದೂವರೆ ಕೋಟಿ 1995-96ರಲ್ಲೇ ಕೊಡಬೇಕಾಗಿತ್ತು. ಅದನ್ನು ಇಷ್ಟು ಡೀಲೆ ಆಗದ ಹಾಗೆ ಪ್ರತಿ ಮೂರು ತಿಂಗಳಿಗೊಮ್ಮೆ ಈ ಬಾಕಿ ಇರುವ ರಿಬೇಟ್ ಹಣ ಖಾದಿ ಗ್ರಾಮೋದ್ಯೋಗಕ್ಕೆ ಹೋಗುವ ವ್ಯವಸ್ಥೆಯನ್ನು ದಯವಿಟ್ಟು ಮಾಡುತ್ತೀರಾ?

6.10 ಪಿ.ಎಂ.

ಶ್ರೀ ಬಿ. ಎ. ಮೊಯಿದ್ದೀನ್: ಆಗಸ್ಟ್ 15ನೇ ತಾರೀಖಿನೊಳಗೆ 214 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ನಾನು ಹೇಳಿಲ್ಲ. ಪರಿಶೀಲಿಸುತ್ತೀರಾ ಎಂದು ತಾವು ಕೇಳಿದ್ದೀರಿ, ನಾವು 'ಹೌದು' ಎಂದು ಹೇಳಿದ್ದೇವೆ. ತಾವು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೋಟ್ಟಿದ್ದೇವೆ.

SRI D. R. PATIL : ..Lot of penidng rebate claims to Khadhi institutions by 15th Aug. 1997 on the eve of Golden Jubilee celebrations.. you have answered 'yes.'. What does it mean?

ಶ್ರೀ ಬಿ. ಎ. ಮೊಯಿದ್ದೀನ್ : ತಾವು ಕನ್ನಡದಲ್ಲಿ ಪ್ರಶ್ನೆಯನ್ನು ಕೇಳಿದ್ದೀರಿ. ಅದೇ ರೀತಿ ಕನ್ನಡದಲ್ಲಿಯ ಉತ್ತರವನ್ನು ನೋಡಿ.

ಶ್ರೀ ಡಿ. ಆರ್. ಪಾಟೀಲ್ : ತಾವು ಇಂಗ್ಲೀಷ್‌ನಲ್ಲಿ ಸಹಿತ ಉತ್ತರವನ್ನು ಕೊಟ್ಟಿದ್ದೀರಿ. ದಯವಿಟ್ಟು ಅದನ್ನು ಕೂಡ ನೋಡಿ.

ಶ್ರೀ ಬಿ. ಎ. ಮೊಯಿದ್ದೀನ್: ತಾವು ಬರೆದಿರುವ ಪ್ರಶ್ನೆ ಕನ್ನಡದಲ್ಲಿ ಅಥವಾ ಇಂಗ್ಲೀಷ್‌ನಲ್ಲಾ? ಅದು ಟ್ರಾನ್ಸ್‌ಲೇಷನ್ ಮಾಡುವವರ ತಪ್ಪು ಇರಬಹುದು. ಆಗಸ್ಟ್ 15ನೇ ತಾರೀಖಿನೊಳಗೆ ಕೊಡಬಾರದು ಎಂದು ಏನೂ ಇಲ್ಲ. ಆದರೆ ಸಂಪನ್ಮೂಲದ ಲಭ್ಯತೆಯನ್ನು ನೋಡಿ ಕೊಡುತ್ತೇವೆ. ಹಾಗೂ ಅದನ್ನು ಕೊಡುವುದಕ್ಕೆ ನಾವು ತತ್ವಶ ಒಪ್ಪಿದ್ದೇವೆ. ಮತ್ತು ನಿಮ್ಮನ್ನೆಲ್ಲಾ ಕರೆದು ಮೀಟಿಂಗ್ ಮಾಡಿ ಅದರಲ್ಲಿರತಕ್ಕಂಥ ತಾಂತ್ರಿಕ ತೊಂದರೆಗಳು ಏನು ಇವೆ, ಅಡ್ವೈಲರಂ ಏನು ಇದೆ ಅದನ್ನು ಸರಿಪಡಿಸುತ್ತೇವೆ. ಹೊರಗಿನಿಂದ ಬರತಕ್ಕಂಥ ಎಲ್ಲಾಖಾದಿಗೆ ರಿಬೇಟ್ ಕೊಡುತ್ತಿರಲಿಲ್ಲ. ಬಹಳ ವರ್ಷದಿಂದ ಇದು ನೆನೆಗುದಿಗೆ ಬಿದ್ದಿತ್ತು. 1992ರಿಂದ 1996ರ ವರೆಗೆ ರಿಬೇಟ್ ಸಿಗುತ್ತಿರಲಿಲ್ಲ. ನಾವು ಮೀಟಿಂಗ್ ಮಾಡಿಸಿ ಹೊರಗಡೆಯಿಂದ ಬರತಕ್ಕಂಥ ಖಾದಿಗೆ ಕೂಡ ಅಡ್ವೈಲರಂ ಎನ್ನತಕ್ಕಂಥ ಶಬ್ಧ ತೆಗೆಸಿ ಸರ್ಕಾರಿ ಆಜ್ಞೆಯಲ್ಲಿರತಕ್ಕಂಥ ತಾಂತ್ರಿಕ ದೋಷವನ್ನು ತೆಗೆಸಿ ರಿಬೇಟ್ ಕೊಡುವಂಥದ್ದನ್ನು ಮಾಡಿದ್ದೇವೆ. ನಾವು ಈಗಾಗಲೇ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಹಣಕಾಸು ಇಲಾಖೆಗೆ ಕೇಳಿದ್ದೇವೆ. ಅವರು ಎಷ್ಟು ಬಿಡುಗಡೆ ಮಾಡುತ್ತಾರೆ ಅದನ್ನು ನೋಡಿಕೊಂಡು, ಸಂಪನ್ಮೂಲದ ಲಭ್ಯತೆಯ ಆಧಾರದ ಮೇಲೆ ಒಪ್ಪಿಕೊಂಡಿರುವ ಹಾಗೆ ಅವರಿಗೆ ರಿಬೇಟ್‌ನ್ನು ಕೊಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಡುತ್ತೇನೆ. ಆದರೆ ಅದಕ್ಕೆ ಲಕ್ಷ್ಮಣ ರೇಖೆಯನ್ನು ಹಾಕಬೇಡಿ. ಹದಿನೈದನೇ ತಾರೀಖಿನೊಳಗೇ ಕೊಡಬೇಕು ಎಂದರೆ ಅದು ಸಾಧ್ಯ ಆಗದೇ ಇರತಕ್ಕಂಥ ವಿಚಾರ.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಮಂತ್ರಿಗಳು ಈ ಸಂಸ್ಥೆಗಳಿಗೆ ಈ ರಿಬೇಟ್ ಹಣ ಪಡೆಯುವುದರಲ್ಲಿ ತೊಂದರೆಯನ್ನು ನಿಭಾಯಿಸಿದ್ದಾರೆ. ಅದಕ್ಕೆ ಅವರಿಗೆ ನನ್ನ ಅಭಿನಂದನೆ. ಆದರೆ ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. This August 15th is a Special occasion for Khandi people. All the pending rebate is only about Rs.2.25 Crores. ದಯವಿಟ್ಟು ಬರುವ ಹದಿನೈದನೇ ಆಗಸ್ಟ್‌ರೊಳಗೆ ಬಿಡುಗಡೇ ಮಾಡುತ್ತೇವೆ ಎನ್ನುವಂಥ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು. ಹಾಗೂ ಇನ್ನು ಮುಂದೆ ಮೂರು ತಿಂಗಳೊಳಗಾಗಿ ಪೆಂಡಿಂಗ್ ರಿಬೇಟ್‌ನ್ನು ಕೊಡಬೇಕು. ಅದು ಬಹಳ ಹೆಚ್ಚು ಆಗುವುದಿಲ್ಲ. ವರ್ಷಕ್ಕೆ ನಾಲ್ಕೈದು ಕೋಟಿ ರೂಪಾಯಿಗಳಾಗುತ್ತವೆ. ಏಕೆಂದರೆ ಅವರಿಗೆ ಮೂರು ತಿಂಗಳೊಳಗಾಗಿ ಬರದಿದ್ದರೆ ತೊಂದರೆಯಾಗುತ್ತದೆ. ಏಕೆಂದರೆ ಅವರು ಮಾರವಾಡಿ ಯವರ ಹತ್ತಿರದಿಂದ ಬಡ್ಡಿಗೆ ತಂದಿರುತ್ತಾರೆ, ಇಲ್ಲವೆಂದರೆ ಕೈಗಡ ತಂದಿರುತ್ತಾರೆ. ಅದಕ್ಕಾಗಿ ಅವರಿಗೆ ಮೂರು ತಿಂಗಳೊಳಗಾಗಿ ಸಿಗುವಂಥ ಒಂದು ಶಾಶ್ವತ ಪರಿಹಾರವನ್ನು ಹುಡುಕಿ ಪೆಂಡಿಂಗ್ ರಿಬೇಟ್‌ನ್ನು ಕೊಡುವ ವ್ಯವಸ್ಥೆ ಮಾಡಬೇಕು ಹಾಗೂ ಈ ಎರಡು ಕಾಲು ಕೋಟಿ ರೂಪಾಯಿಗಳನ್ನು ಆಗಸ್ಟ್15 ರೊಳಗೆ ಬಿಡುಗಡೆ ಮಾಡುವ ವ್ಯವಸ್ಥೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಡಿ.ಆರ್. ಪಾಟೀಲರು ಮಾತನಾಡುವ ಉದ್ದೇಶ ಇಷ್ಟೇ, ನಾವು ಸ್ವಾತಂತ್ರ್ಯದ ಸುವರ್ಣೋತ್ಸವ ನಡೆಸುತ್ತಿದ್ದೇವೆ, ಖಾದಿಗೆ ವಿಶೇಷ ಮಹತ್ವವಿದೆ ಆದಕಾರಣ ಬಾಕಿ ಇರುವ ಎರಡು ಕಾಲು ಕೋಟಿ ರೂಪಾಯಿ ರಿಬೇಟ್ ಹಣವನ್ನು ಆಗಸ್ಟ್ 15ನೇ ತಾರೀಖಿನೊಳಗೆ ಬಿಡುಗಡೆ ಮಾಡಬೇಕು ಎಂದು ಕೇಳಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಸಂಪನ್ಮೂಲದ ಲಭ್ಯತೆಯನ್ನು ನೋಡಿಕೊಂಡು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ನನಗೆ ಅರ್ಥವಾಯಿತು. ಅದು ಮಾಡಬೇಕಾದುದು. ಮಾಡುತ್ತೇವೆ. ಆದರೆ ಒಂದು ವಿಷಯ ಮಾನ್ಯ ಪಾಟೀಲರೇ, ಖಾದಿಯ ಬಗ್ಗೆ ಹೇಳುವುದಾದರೆ ಇದು ಮೊದಲು ಒಂದು ವಿಷಯ ಮಾನ್ಯ ಪಾಟೀಲರೇ, ಖಾದಿಯ ಬಗ್ಗೆ ಹೇಳುವುದಾದರೆ ಇದು ಮೊದಲು ಒಂದು ಕಾಲಕ್ಕೆ ತಮ್ಮನ್ನು ತಾವು ಕಾಪಾಡಿಕೊಳ್ಳುವಷ್ಟು ಶಕ್ತಿಯನ್ನು ಹೊಂದಿತ್ತು. ಆದರೆ ಈಗ ನಾವು ಎಲ್ಲದಕ್ಕೂ ಸಬ್ಸಿಡೈಸ್ಡ್ ಮಾಡುವುದು ಎಂದರೆ ಸ್ವಲ್ಪ ಕಷ್ಟವಾಗುತ್ತದೆ. ನಾವು ಈಗ ಖಾದಿ ಗ್ರಾಮೋದ್ಯೋಗ ಎಂದು ಕರೆಯುತ್ತಿದ್ದೇವೆ. ಅದು ಒಂದು ಉದ್ಯೋಗ. ಆದರೆ ಅವು ಇವತ್ತೋ ಬರೀ ಸಬ್ಸಿಡಿಯಲ್ಲಿಯೇ ಬದುಕುತ್ತಾ ಇದೆ. ಅದನ್ನು ಕೂಡ ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ. ಸದ್ಯಕ್ಕೆ ಈಗ 50ನೇ ವರ್ಷಕ್ಕೆ ಸರ್ಕಾರ ಏನು ನೆರವಿಗೆ ಬರಬೇಕೋ ಅದಕ್ಕೆ ಬರೋಣ.

ಶ್ರೀ ಬಿ. ಎ. ಮೊಯ್ದೀನ್ : ಈಗ ಕೇಂದ್ರ ಸರ್ಕಾರದವರು ಈ ರೀಬೇಟಿನ ಸ್ವರೂಪವನ್ನು ಬದಲಾಯಿಸಬೇಕೆಂದು ಮಾಡಿದ್ದಾರೆ. ರೀಬೇಟನ್ನು ನಿಲ್ಲಿಸಿ ಎಂ.ಡಿ.ಎ. ಮಾರ್ಕೆಟ್ ಡೆವಲೆಪ್‌ಮೆಂಟ್ ಅಸಿಸ್ಟೆನ್ಸ್ ಎಂದು ಬದಲಾವಣೆ ಮಾಡಿ ಯಾರು ಉತ್ಪಾದನೆ ಮಾಡುತ್ತಾರೆ ಅವರಿಗೆ ಅಸಿಸ್ಟೆನ್ಸ್

ಕೊಡುತಕ್ಕಂಥ ಸೂಚನೆಗಳು ಕೇಂದ್ರದಿಂದ ಬಂದಿದೆ. ಆದ್ದರಿಂದ ಈ ವರ್ಷ ರಿಬೇಟ್ ಸಿಕ್ಕೇ ಸಿಗುತ್ತದೆ. ಆದರೆ ಯಾರು ಖಾದಿಯಲ್ಲಿ ತೊಡಗೊದ್ದಾರೆ ಅವರು ಮುಂದೆ ರಿಬೇಟ್ ಮೇಲೆ ಹೊಂದಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಈ ಮನೆಯ ಮೂಲಕ ಅವರಿಗೆ ತಿಳಿಸಲಿಷ್ಟಪಡುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು. ಇಂದು ನಾವು ಐದು ಪ್ರಶ್ನೆಗಳನ್ನು ಬಿಟ್ಟಾಗ್ಯೂ ಕೂಡ ಐದು ನಿಮಿಷ ಮಾತ್ರ ಮೊದಲು ಮುಗಿಸಿದ್ದೇವೆ. ಅಂದರೆ ಇವತ್ತು ಕೂಡ ನಾವು ಕಲಾಪವನ್ನು ಸರಿಯಾಗಿ ಮಾಡುತ್ತಿಲ್ಲ. ಆದಕಾರಣ ಮಾನ್ಯ ಸದಸ್ಯರಲ್ಲಿ ಹಾಗೂ ಮಂತ್ರಿಗಳಲ್ಲಿ ನಾನು ವಿನಂತಿ ಮೂಡಿಕೊಳ್ಳುವುದೇನೆಂದರೆ ಪ್ರಶ್ನೆಗಳನ್ನು ಕೇಳುವಾಗ ಸದಸ್ಯರು ಸಂಕ್ಷಿಪ್ತವಾಗಿ ಕೇಳಬೇಕು. ಪ್ರಶ್ನೆಗಳನ್ನು ಮೊದಲೇ ಮನಸ್ಸಿನಲ್ಲಿ ರೂಪಿಸಿಕೊಂಡಿರಬೇಕು. ನೀವು ಪ್ರಶ್ನೆಗಳನ್ನು ಕೇಳುವಾಗ ಭಾಷಣ ಮಾಡುವುದು ಬೇಕಾಗಿಲ್ಲ. ಮಂತ್ರಿಗಳೂ ಸಹ ಎಲ್ಲಾ ಮಾಹಿತಿಯನ್ನು ಕೊಡಬೇಕಾದ ಅವಶ್ಯಕತೆ ಇಲ್ಲ. ಸೂಕ್ಷ್ಮವಾಗಿ ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರಗಳನ್ನು ಕೊಟ್ಟರೆ ನನಗೆ ಸಮಯವನ್ನು ನಿಯಂತ್ರಣ ಮಾಡುವುದಕ್ಕೆ ಸುಲಭವಾಗುತ್ತದೆ. ದಯವಿಟ್ಟು ಅದನ್ನೆಲ್ಲರೂ ಗಮನದಲ್ಲಿಟ್ಟು ಕೊಳ್ಳಬೇಕೆಂದು ನನ್ನ ವಿನಂತಿ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 19ನೇ ಪಟ್ಟಿಯಲ್ಲಿರುವ 46 ಪ್ರಶ್ನೆಗಳ ಪೈಕಿ 39 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಹುಡ್ಕೋ ಸಂಸ್ಥೆಯಿಂದ ಸಂಸ್ಥೆಗಳಿಗೆ ಬಿಡುಗಡೆಯಾದ ಹಣ

1548 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1997-98ನೇ ಸಾಲಿನಲ್ಲಿ ಹುಡ್ಕೋ ಸಂಸ್ಥೆಯು ಕರ್ನಾಟಕದಲ್ಲಿನ ವಿವಿಧ ಸಂಸ್ಥೆಗಳಿಗೆ ಬಿಡುಗಡೆ ಮಾಡಲು ಒಪ್ಪಿಗೆ ನೀಡಿದ ಮೊತ್ತವೆಷ್ಟು ?

ಆ) ಬಳ್ಳಾರಿ ಜಿಲ್ಲೆಯಲ್ಲಿನ ನೆರೆಹೊರೆಯ ಅಭಿವೃದ್ಧಿಗಾಗಿ ನಿವೇಶನಗಳು ಹಾಗೂ ಸೇವಾ ಯೋಜನೆಗಳಿಗೆ ಬಿಡುಗಡೆ ಮಾಡಲು ಉದ್ದೇಶಿಸಿರುವ ಮೊತ್ತವೆಷ್ಟು ?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ರೂ. 74.18 ಕೋಟಿಗಳು

ಆ) ಹುಡ್ಕೋ ಸಂಸ್ಥೆಯು ಹಣ ಬಿಡುಗಡೆ ಮಾಡಿದಲ್ಲಿ ರೂ.446.60 ಲಕ್ಷಗಳನ್ನು ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ವಿವಿಧ ಯೋಜನೆಗಳಡಿಯಲ್ಲಿ ಉಪಯೋಗಿಸಲು ಉದ್ದೇಶಿಸಲಾಗಿದೆ.